

# ಹೆಬಾ ಮತ್ತು ರಾಮರಸ

'ಅಧ್ಯಕ್ಷ' ಸಿನಿಮಾ ಮೂಲಕ ಕನ್ನಡಿಗರಿಗೆ ಪರಿಚಿತರಾಗಿದ್ದ ಹೆಬಾ ಪಟೇಲ್ ಇದೀಗ ಹತ್ತು ವರ್ಷದ ನಂತರ ಮತ್ತೆ ಕನ್ನಡ ಸಿನಿಮಾರಂಗಕ್ಕೆ ಮರಳಿದ್ದು, ಬೋಲ್ಡ್ ಪಾತ್ರದಲ್ಲಿ ಮಿಂಚಲು ಅಣಿಯಾಗಿದ್ದಾರೆ.

'ಬಿಗ್‌ಬಾಸ್ ರಿಯಾಲಿಟಿ ಶೋ' ವಿನ್ನರ್ ಆಗಿದ್ದ ಕಾರ್ತಿಕ್ ಮಹೇಶ್ ಅವರ ಜೊತೆ 'ರಾಮರಸ' ಸಿನಿಮಾದಲ್ಲಿ ಲೀಡ್ ರೋಲ್‌ನಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ನಟ ಶರಣ್ ಜೋಡಿಯಾಗಿ 'ಅಧ್ಯಕ್ಷ' ಸಿನಿಮಾದಲ್ಲಿ ಹೆಬಾ ಜನಪ್ರಿಯ ಆಗಿದ್ದರು. ಹಳ್ಳಿ ಹುಡುಗಿಯಾಗಿ ಕನ್ನಡಿಗರ ಮನ ಗೆದ್ದಿದ್ದರು. ಆನಂತರ ತಮಿಳು ಹಾಗೂ ತೆಲುಗು ಸಿನಿಮಾರಂಗದಲ್ಲಿ ಹಲವು ಅವಕಾಶಗಳು ದೊರೆತು ಬ್ಯುಸಿಯಾಗಿದ್ದರು. ಇದೀಗ ಹತ್ತು ವರ್ಷಗಳ ನಂತರ ಕನ್ನಡಕ್ಕೆ ಕಮ್‌ಬ್ಯಾಕ್ ಮಾಡಿದ್ದಾರೆ.

ರಾಷ್ಟ್ರಪ್ರಶಸ್ತಿ ಪುರಸ್ಕೃತ ನಿರ್ದೇಶಕ ಬಿ.ಎಂ ಗಿರಿರಾಜ್ ಅವರು 'ರಾಮರಸ' ಸಿನಿಮಾಗೆ ಆ್ಯಕ್ಷನ್ ಕಟ್ ಹೇಳುತ್ತಿದ್ದು, ಹೆಬಾ ಪಾತ್ರದ ಪೋಸ್ಟರ್ ಈಚೆಗೆ ಬಿಡುಗಡೆಯಾಗಿದೆ.

'ಅವಳ ಅಂದಕ್ಕೆ ಸೋತವರು, ಮಾತಿಗೆ ಮರುಳಾದವರು, ನಡಿಗೆಗೆ ನಡುಗಿದವರಾರೂ, ಭೂಮಿ ಮೇಲೆ ಉಳಿದೇ ಇಲ್ಲ, ಗಂಡಸರ ಆಸೆಗೆ ಅವಳು ಒಂದು ಮಿಸ್ಟರಿ... ಅವಳೇ ಭ್ರಮರಿ' ಎಂದು ಹೆಬಾ ಪಟೇಲ್ ನಿಭಾಯಿಸುವ ಪಾತ್ರವನ್ನು ವರ್ಣಿಸಲಾಗಿದೆ. ಹೆಬಾ ಪಾತ್ರ ಬೋಲ್ಡ್ ಅಂಡ್ ಬ್ಯೂಟಿಫುಲ್ ಆಗಿರಲಿದೆ ಎಂದೂ ತಂಡ ತಿಳಿಸಿದೆ. ಮತ್ತೆ ಕನ್ನಡದಲ್ಲಿ ಸದ್ದು ಮಾಡಲು ಸಜ್ಜಾಗಿದ್ದಾರೆ ಹೆಬಾ.



# ಕ್ರಾಂತಿಕಾರಿ ಸತೀಶ್!

ದಬ್ಬಾಳಿಕೆ ವಿರುದ್ಧ ಹೋರಾಡುವ ಪಾತ್ರವೊಂದರಲ್ಲಿ ನಟ ಸತೀಶ್ ನೀನಾಸಂ ಕಾಣಿಸಿಕೊಳ್ಳುತ್ತಿದ್ದು, ಎರಡೂ ಕೈಗಳಲ್ಲಿ ಮಚ್ಚು ಹಿಡಿದು ಮಾಸ್ ಅವತಾರದಲ್ಲಿ ಕಾಣಿಸಿಕೊಂಡಿದ್ದಾರೆ.

ಈಚೆಗೆ 'ಅಯೋಗ್ಯ 2' ಸಿನಿಮಾ ಘೋಷಣೆಯಾಗಿದ್ದು, ಆ ಸಿನಿಮಾದಲ್ಲೂ ಸತೀಶ್ ಬ್ಯುಸಿಯಾಗಿದ್ದಾರೆ. ಈ ನಡುವೆ ಅವರ ನಟನೆಯ 'ದ ರೈಸ್ ಆಫ್ ಅಶೋಕ' ಚಿತ್ರದ ಫಸ್ಟ್‌ಲುಕ್ ಬಿಡುಗಡೆಗೊಂಡಿದೆ. 'ಎಲ್ಲ ಯುದ್ಧಗಳು ಯುದ್ಧಭೂಮಿಯಲ್ಲಿ ನಡೆಯುವುದಿಲ್ಲ' ಎಂಬ ಅಡಿಬರಹವಿದ್ದು, ರಕ್ತಸಿಕ್ತ ಅಧ್ಯಾಯದ ಕಥೆ ಹೇಳುತ್ತಿರುವ ಮಾಸ್ ಚಿತ್ರದಂತೆ ಕಾಣುತ್ತಿದೆ.

ಈ ಸಿನಿಮಾ ಬಗ್ಗೆ ಮಾತನಾಡಿರುವ ಸತೀಶ್, 'ಇದು ವ್ಯಾಪಾರಿ ಮತ್ತು ಕೆಲಸಗಾರರ ನಡುವಿನ ಕಥೆ. ರೆಟ್ರೊ ಶೈಲಿಯ ಕಥೆಯಾಗಿದ್ದು ರೌಡಿಸಂ ಕಥೆಯಲ್ಲ. ಕ್ರಾಂತಿಕಾರಿ ಅಶೋಕನ ಕಥೆ. ವ್ಯಾಪಾರಿಗಳು ಕೂಲಿ ಕೆಲಸಗಾರರ ಮೇಲೆ ದಬ್ಬಾಳಿಕೆ ಮಾಡುವುದು ಬಹಳ ಕಾಲದಿಂದ ನಡೆದುಕೊಂಡು ಬಂದಿದೆ. ಅದರ ವಿರುದ್ಧ, ಜೀತವನ್ನು ಪ್ರತಿಭಟಿಸಿ ಬಂಡೇಳುವ ನಾಯಕನ ಕಥೆ' ಎಂದಿದ್ದಾರೆ.

ಫೆ. 15ರಿಂದ ಚಿತ್ರೀಕರಣ ಮುಂದುವರಿಯಲಿದ್ದು, ಶೀಘ್ರದಲ್ಲಿ ಚಿತ್ರವನ್ನು ತೆರೆಗೆ ತರುವ ಆಲೋಚನೆಯಿದೆ. ಮೂರು ಭಾಷೆಗಳಲ್ಲಿ ಚಿತ್ರ ನಿರ್ಮಾಣವಾಗುತ್ತಿದೆ ಎಂದು ಮಾಹಿತಿ ನೀಡಿದೆ ಚಿತ್ರತಂಡ. ಬಿ. ಸುರೇಶ್, ಗೋಪಾಲ ದೇಶಪಾಂಡೆ ಮೊದಲಾದವರು ತಾರಾಗಣದಲ್ಲಿದ್ದಾರೆ.